ಸರ್ವ ಶಿಕ್ಷಣ ಅಭಿಯಾನ ಸಮಿತಿ- ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು

ಸಂ.ಸಶಿಅ/ಸಿಎಎಲ್‌ಸಿ/2010-11 26.04.2010

## ಸುತ್ತೋಲೆ

ವಿಷಯ: ಕಂಪ್ಯೂಟರ್ ಕಲಿಕಾ ಕೇಂದ್ರ (ಸಿ.ಎ.ಎಲ್.ಸಿ) ಗಳ ಕಾರ್ಯನಿರ್ವಹಣೆ ಕುರಿತು.

***

ಪ್ರಾಥಮಿಕ ಶಾಲಾ ಮಕ್ಕಳಿಗೆ ಕಂಪ್ಯೂಟರ್ ಬಳಸಿ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಕಲಿಕಾ ಕೇಂದ್ರ (ಸಿ.ಎ.ಎಲ್.ಸಿ)ಗಳನ್ನು ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲಾಗುತ್ತದೆ. ಇದಕ್ಕೆ ಪೂರಕವಾಗಿ ಬೇಕಾಗಿರುವ ಸಾಲಕರಣೆಗಳನ್ನು, ನಿರ್ವಹಣೆ ಕಾರ್ಯವನ್ನು, ಸಾಮಗ್ರಿಗಳನ್ನು ಹಾಗೂ ಶಿಕ್ಷಕರ ತರಬೇತಿಯನ್ನು ನಡೆಸಲಾಗುತ್ತಿದೆ.

ಮಕ್ಕಳಲ್ಲಿ ನಿರ್ದಿಷ್ಟ ಕಲಿಕೆಯನ್ನು ಮೂಡಿಸಲು ಕಂಪ್ಯೂಟರ್‌ಗಳನ್ನು ಬಳಸಿಕೊಳ್ಳುವುದರೊಂದಿಗೆ ಶಿಕ್ಷಕರು ಸ್ವತ: ಕಂಪ್ಯೂಟರ್‌ಗಳನ್ನು ಪಾಠಗಳನ್ನು ಸಿದ್ಧಪಡಿಸಿ ತರಗತಿ ಬೋಧನೆ ಹಾಗೂ ಕಲಿಕೆಯಲ್ಲಿ ಬಳಸಿಕೊಳ್ಳಲು ಅನುವಾಗುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕಂಪ್ಯೂಟರ್‌ಗಳ ಕಾರ್ಯ ನಿರ್ವಹಣೆಯಲ್ಲಿ ಉಂಟಾಗುವ ಸಮಸ್ಯೆಗಳಲ್ಲಿ ನಿವಾರಿಸಿ ಅವುಗಳು ನಿರಂತರವಾಗಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದು ಅತ್ಯವಶ್ಯವಾಗಿದೆ.

ಈ ಉದ್ದೇಶದಿಂದ 2010-11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನಾ ಅನುಮೋದನಾ ಸಭೆಯಲ್ಲಿ ಚಟುವಟಿಕೆವಾರು ಸಿ.ಎ.ಎಲ್.ಸಿ ಕಾರ್ಯಕ್ರಮಕ್ಕಾಗಿ ಜಿಲ್ಲಾವಾರು ಅನುಮೋದಿತ ಅನುದಾನವನ್ನು ಅನುಬಂಧದಲ್ಲಿ ಲಗತ್ತಿಸಿದೆ. ಈ ಸಾಲಿನಲ್ಲಿ ಸಿ.ಎ.ಎಲ್.ಸಿ ಕಾರ್ಯಕ್ರಮದಡಿಯಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳ ವಿವರವನ್ನು ಕೆಳಕಂಡಂತೆ ನೀಡಿದೆ.

1. ಕಂಪ್ಯೂಟರ್ ಕಲಿಕಾ ಕೇಂದ್ರಗಳಲ್ಲಿ ತರಗತಿ ನಿರ್ವಹಣೆ:
   - ಪ್ರತಿ ತರಗತಿಯ ಮಕ್ಕಳ ಗುಂಪುಗಳಿಗೆ ಪ್ರತಿ ವಾರ ಕನಿಷ್ಠ ಎರಡು ಅವಧಿಗಳನ್ನು ಕಂಪ್ಯೂಟರ್ ಸಹಾಯಿತ ಕಲಿಕೆಗೆ ಲಭ್ಯವಾಗುವಂತೆ ವೇಳಾಪಟ್ಟಿಯನ್ನು ರಚಿಸಿ, ಅದನ್ನು ಕಂಪ್ಯೂಟರ್ ಕೇಂದ್ರದಲ್ಲಿ ಪ್ರದರ್ಶಿಸಬೇಕು.
   - ಮಕ್ಕಳು ಗುಂಪಿನಲ್ಲಿ ಕಂಪ್ಯೂಟರ್ ಬಳಸುವಾಗ ಪ್ರತಿ ಮಗುವಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು ಮತ್ತು ಪ್ರತಿ ಗುಂಪಿನಲ್ಲಿ ಇರಬೇಕಾದ ಅಪೇಕ್ಷಿತ ಮಕ್ಕಳ ಸಂಖ್ಯೆ 3 ರಿಂದ 5.
   - ತರಗತಿಯಲ್ಲಿ ವಿಷಯವನ್ನು ಬೋಧಿಸಿದ ಮೇಲೆ ಅದಕ್ಕೆ ಸಂಬಂಧಿಸಿದ ಸಿ.ಡಿ.ವೀಕ್ಷಣೆಗೆ ಪೂರಕ ಕಲಿಕೆಗೆ ಅವಕಾಶ ಮಾಡಿಕೊಡಬೇಕು. ಶಿಕ್ಷಕರು ಒದಗಿಸಲಾದ ಕಂಪ್ಯೂಟರ್ ಪಾಠಗಳನ್ನು ಪೂರ್ವಭಾವಿಯಾಗಿ ವೀಕ್ಷಿಸಿ ಯಾವ ವಿಷಯಕ್ಕೆ ಸಂಬಂಧಿಸಿದ ಪಾಠಗಳನ್ನು ನೀಡಲಾಗಿದೆ ಎಂಬ ಕುರಿತು ಪಟ್ಟಿಯನ್ನು ಸಿದ್ಧಪಡಿಸಿಕೊಂಡು, ಸಂಬಂಧಿಸಿದ ತರಗತಿಗಳಿಗೆ ಸೂಕ್ತವಾಗಿ ಬಳಕೆ ಮಾಡುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಕಂಪ್ಯೂಟರ್ ಕೊಠಡಿಯಲ್ಲಿ ಪ್ರದರ್ಶಿಸಬೇಕು.
   - ಮಕ್ಕಳು ಕಂಪ್ಯೂಟರ್ ಕೊಠಡಿಗೆ ಭೇಟಿ ನೀಡಿದ ವಿವರ ಹಾಗೂ ಕಲಿಕೆಯಲ್ಲಿ ತೊಡಗಿದ ವಿಷಯ ಕುರಿತಂತೆ ಕೆಳಕಂಡ ನಮೂನೆಯಲ್ಲಿ ವಿವರವನ್ನು ನಿರ್ವಹಿಸಬೇಕು.